# ತತ್ವಪದಗಳ ಪ್ರಾಯೋಗಿಕ ನೆಲೆಗಳು

**ನಾಗಪ್ಪ ಬಾರಕೇರ**

ಮುಖ್ಯಸ್ಥರು, ಕನ್ನಡ ವಿಭಾಗ, ದಾನಮ್ಮದೇವಿ ಕಲಾ, ವಾಣಿಜ್ಯ ಹಾಗೂ ವಿಜ್ಞಾನ ಮಹಿಳಾ ಮಹಾವಿದ್ಯಾಲಯ, ಮುಧೋಳ.

DOI: https://doi.org/10.5281/zenodo.15124122

## ABSTRACT:

ಕನ್ನಡ ಸಾಹಿತ್ಯದಲ್ಲಿ ತತ್ವಪದ ಸಾಹಿತ್ಯವು ಒಂದಾಗಿದ್ದು, 18 ಮತ್ತು 19 ನೇ ಶತಮಾನದ ಕಾಲಾವಧಿಯನ್ನು 'ತತ್ವಪದ ಸಾಹಿತ್ಯದ ಸುವರ್ಣಯುಗ'ವೆಂದು ಕರೆಯಲಾಗಿದೆ. ನಿಜಗುಣ ಶಿವಯೋಗಿ, ಸರ್ಪಭೂಷಣ, ಸಂತ ಶಿಶುನಾಳ ಶರೀಫ, ಕಡಕೋಳ ಮಡಿವಾಳಪ್ಪನಂತವರು ತತ್ವಪದ ಸಾಹಿತ್ಯವನ್ನು ಬೆಳಸಿಕೊಂಡು ಬಂದಿದ್ದಾರೆ. ಇದೊಂದು ನಡೆ-ನುಡಿಯ ಪರಂಪರೆಯಾಗಿದೆ. ಇಲ್ಲಿನ ತತ್ವಪದಗಳು ಏಕತಾರಿ, ಭಜನೆ, ಜಾನಪದ ಹಾಗೂ ಸಂಗೀತದ ಮಾದರಿಯಲ್ಲಿ ಹಾರ್ಮೋನಿಯಂ, ತಾಳ, ಡಗ್ಗಾ, ತಬಲ, ದಮ್ಮಡಿ ಮುಂತಾದ ವಾದ್ಯ ಪರಿಕರಗಳಿಂದ ತತ್ವಪದಗಳು ಪ್ರಯೋಗಗೊಳ್ಳುತ್ತಾ ಬಂದಿವೆ. ಪ್ರಸ್ತುತ ಲೇಖನದಲ್ಲಿ ತತ್ವಪದಗಳು ಏಕತಾರಿ ಹಾಡು, ಭಜನಾಪದಗಳಾಗಿ ವೃತ್ತಿ ಕಲಾವಿದರು ಮತ್ತು ಹವ್ಯಾಸಿ ಕಲಾವಿದರ ಮೂಲಕ ಪ್ರಯೋಗಗೊಳ್ಳುವ ಬಗೆಯ ಕುರಿತಾಗಿ ಪ್ರಸ್ತುತಪಡಿಸಲಾಗಿದೆ.

## KEYWORDS:

ತತ್ವಪದ ಪ್ರಯೋಗ, ಕಲಾವಿದ, ಏಕತಾರಿ, ಭಜನೆ, ಹಾರ್ಮೋನಿಯಂ ಡಗ್ಗಾ.

ತತ್ವಪದ ಸಾಹಿತ್ಯ ಅನುಭಾವ ಪರಂಪರೆಯಾಗಿದ್ದು, ಗೇಯತೆ ಸ್ವರೂಪ ಪಡೆದು ಇವತ್ತಿಗೂ ಪ್ರಚಲಿತದಲ್ಲಿದೆ. ತತ್ವಪದಕಾರರು ಕಾಯದೊಳಗಿರುವ ಅಕಾಯ ದೇವನ ಕಾಣಲು ಹಂಬಲಿಸಿದವರು. ಏಕಾಗ್ರತೆಯಲ್ಲಿ ಕಣ್ಣು ಮುಚ್ಚಿ ಏಕಾಂತದಲ್ಲಿ ತನ್ಮಯರಾಗಿ ಕುಳಿತು ಕೈಯಲ್ಲಿ ಏಕತಾರಿ ಹಿಡಿದು ನುಡಿಸುತ್ತ ತಮ್ಮ ಅಂತರಂಗದಲ್ಲಿ ಅಡಗಿದ ಅಕಾಯ ದೇವನ ಅನುಭವವನ್ನು ತತ್ವಪದದೊಂದಿಗೆ ಹೊರಸೂಸಿದವರು. ಏಕರೂಪ ಸಂಸ್ಕೃತಿಯನ್ನು ಪ್ರತಿನಿಧಿಸುವ ವೇದ-ಆಗಮಗಳನ್ನು ತಿರಸ್ಕರಿಸಿ ಮನುಕುಲದ ಏಳ್ಗೆ ಬಯಸುವ ಅಂಶಗಳಿಗೆ ಬೆಲೆಕೊಟ್ಟವರು ತತ್ವಪದಕಾರರಾಗಿದ್ದಾರೆ. ತತ್ವಪದಗಳು ನಾನಾರೆಂಬುದು ನಾನಲ್ಲ ಈ ಮಾನುಷ ಜಲ್ಮವು ನಾನಲ್ಲ ಎಂಬ ಅನಾತ್ಮವಾದಿ ನೆಲೆಯಿಂದ ಹೊರಡುವಂತವುಗಳಾಗಿವೆ. ಇಂತಹ ಕಾರಣಗಳಿಂದಾಗಿಯೇ ಭಾರತೀಯ ಪರಂಪರೆಯಲ್ಲಿ ಜಾತ್ಯಾತೀತ ಅನುಭಾವಿ ಸಾಹಿತ್ಯವು ಬಹುದೊಡ್ಡ ಪ್ರಮಾಣದಲ್ಲಿ ಬೆಳೆದುಕೊಂಡುಬಂದಿದೆ. ವೈದಿಕ ಸಾಹಿತ್ಯವು ದೇವರು, ಧರ್ಮ, ಜ್ಞಾನ ಎಲ್ಲವನ್ನೂ ಗರ್ಭಗುಡಿಯಲ್ಲಿರಿಸಿದರೆ ತತ್ವಪದಗಳು ಗರ್ಭಗುಡಿಯನ್ನು ಬಿಟ್ಟು ಬೀದಿಗಳಲ್ಲಿ ಏಕತಾರಿಯೊಂದಿಗೆ ಜನಸಾಮಾನ್ಯರತ್ತ ಹೊರಳಿದವು. ಗರ್ಭಗುಡಿಯಲ್ಲಿನ

ಗ್ರಂಥಗಳು ತಿಳಿಸಿಕೊಡಲಾಗದ್ದನ್ನು ಬಯಲಿನಲ್ಲಿರುವ ತತ್ವಪದಗಳು ತಮ್ಮದೇ ಆದ ಶೈಲಿಯಲ್ಲಿ ನಿತ್ಯ ಬದುಕಿನ ಪ್ರತೀಕಗಳ ಮೂಲಕ ನಮಗೆ ತಿಳಿಸಿಕೊಟ್ಟವು.

ತತ್ವಪದಗಳು ಜನಪ್ರೀಯತೆ ಪಡೆಯಲು ಅವು ಪ್ರಯೋಗಗೊಳ್ಳುವಿಕೆಯೇ ಕಾರಣವಾಗಿದೆ. ಈ ಪ್ರಯೋಗಗೊಳ್ಳುವಿಕೆಯು ಪರಿಸರದಿಂದ ಪರಿಸರಕ್ಕೆ ತತ್ವಪದಗಳ ಪ್ರಯೋಗದಲ್ಲಿ ಭಿನ್ನತೆಗಳುಂಟು. ಹಾಡುವ ಶೈಲಿ, ಬಳಸುವ ತತ್ವಪದಗಳು ಮತ್ತು ವಾದ್ಯ ಪರಿಕರಗಳಿಂದ ಈ ವ್ಯತ್ಯಾಸ ಕಾಣುತ್ತೇವೆ. ತತ್ವಪದ ಪ್ರಯೋಗಗೊಳ್ಳುವಿಕೆಯಲ್ಲಿ ಎರಡು ವಿಧ ಕಾಣುತ್ತೇವೆ. ಅವು ಏಕವ್ಯಕ್ತಿ ಮಾದರಿ ಮತ್ತು ಬಹುವ್ಯಕ್ತಿ ಮಾದರಿಗಳಾಗಿವೆ. ಏಕವ್ಯಕ್ತಿ ಮಾದರಿಯಲ್ಲಿ ಏಕತಾರಿ ಹಾಡು, ಬಹುವ್ಯಕ್ತಿ ಮಾದರಿಯಲ್ಲಿ ಭಜನಾ ಹಾಡು, ಜಾನಪದ ಹಾಡು ಮತ್ತು ಸಂಗೀತದ ಹಾಡುಗಳು ಇರುವುದನ್ನು ಕಾಣುತ್ತೇವೆ. ಏಕವ್ಯಕ್ತಿ ಮಾದರಿಯಲ್ಲಿ ಒಬ್ಬ ವ್ಯಕ್ತಿ ಮಾತ್ರ ಹಾಡುತ್ತಿರುತ್ತಾನೆ. ಬಹುವ್ಯಕ್ತಿ ಮಾದರಿಯಲ್ಲಿ ಹಲವು ಜನ ಕಲಾವಿದರು ಇರುತ್ತಾರೆ. ಏಕವ್ಯಕ್ತಿ ಮಾದರಿಯಲ್ಲಿ ಏಕತಾರಿ ಹಾಡುಗಳು ಕಂಡಬಂದರೆ ಬಹುವ್ಯಕ್ತಿ ಮಾದರಿಯಲ್ಲಿ ಭಜನಾಪದ, ಜನಪದ ಹಾಡುಗಳು ಮತ್ತು ಸಂಗೀತ ಮಾದರಿಯ ಹಾಡುಗಳು ಕಂಡುಬರುತ್ತವೆ. ಇವುಗಳಲ್ಲಿ ಏಕತಾರಿ, ಭಜನಾಪದ ಹಾಡುಗಾರಿಕೆಯ ಕುರಿತಾಗಿ ಸಂಕ್ಷಿಪ್ತವಾಗಿ ಕೆಳಕಂಡಂತೆ ಅರಿಯಲಾಗಿದೆ.

**ಏಕತಾರಿ ಹಾಡುಗಾರಿಕೆಯ ಸ್ವರೂಪ:**

ಏಕವ್ಯಕ್ತಿ ಮಾದರಿಯಲ್ಲಿ ಏಕತಾರಿ ಹಾಡುಗಳು ಇವೆ. ತತ್ವಪದಕಾರರು ಒಂದೆಡೆ ಏಕಾಂತ ಬಯಸಲು ಏಕತಾರಿ ವಾದ್ಯ ಬಳಸಿ ತಾವು ರಚಿಸಿದ ತತ್ವಪದಗಳನ್ನು ಏಕತಾರಿಯೊಂದಿಗೆ ಹಾಡುತ್ತಿದ್ದರು. ಈ ಹಾಡುಗಳನ್ನು ಏಕತಾರಿ ಹಾಡುಗಳೆಂದು ಕರೆಯಲಾಗಿದೆ. ಈ ಏಕತಾರಿ ವಾದ್ಯದೊಂದಿಗೆ ರಾಗ, ಲಯಬದ್ಧವಾಗಿ ಹಾಡಲು ತತ್ವಪದಕಾರರು ಮುಂದಾಗಿದ್ದಾರೆ. ಅಂತವರಲ್ಲಿ ಶರೀಫರು ಒಬ್ಬರಾಗಿದ್ದು, ಏಕತಾರಿ ಮೂಲಕ ಪದಗಳನ್ನು ರಚಿಸಿ ಹಾಡುತ್ತಿದ್ದರು. ಏಕತಾರಿ ಎಂಬುವುದೊಂದು ಒಂದೇ ತಂತಿಯುಳ್ಳ ವಾದ್ಯವಾಗಿದೆ. ಏಕತಾರಿ ಹಾಡುವ ಪದಗಳು ನಿಧಾನಗತಿಯಿಂದ ಮುಂದುವರೆದುಕೊಂಡು ಹೋಗುತ್ತವೆ. ವೃತ್ತಿ ಮತ್ತು ಹವ್ಯಾಸಿ ಕಲಾವಿದರಿಂದ ಏಕತಾರಿ ಹಾಡುಗಳು ಪ್ರಯೋಗಗೊಳ್ಳುತ್ತವೆ. ಉದಾಹರಣೆಗಾಗಿ ಗದಗ ಜಿಲ್ಲೆಯ ರೋಣ ತಾಲ್ಲೂಕಿನ ತುಂಬರಗುತ್ತಿ ಗ್ರಾಮದ ವೃತ್ತಿ ಗಾಯಕರಾದ ಶ್ರೀ ಹನಮಂತಪ್ಪ ಚನ್ನದಾಸರ ಕಲಾವಿದ ಈ ವಾದ್ಯ ಬಳಸಿ ಮನೆ-ಮನೆಗೆ ಭಿಕ್ಷೆ ಬೇಡುತ್ತ ಶರೀಫರ, ನಿಜಗುಣರಂತಹ ತತ್ವಪದಕಾರರ ಹಾಡುಗಳನ್ನು ಹಾಡುತ್ತಾ ಬಂದಿದ್ದಾರೆ. ಹಾಗೇ ಏಕತಾರಿಯು ಆಧುನಿಕತೆಯಲ್ಲಿ ಹವ್ಯಾಸಿ ಕಲಾವಿದರ ಮೂಲಕ ವಿವಿಧ ಸಭೆ-ಸಮಾರಂಭಗಳಲ್ಲಿ, ಆಕಾಶವಾಣಿ, ದೂರದರ್ಶನಗಳಂತಹ ಮಾಧ್ಯಮಗಳಲ್ಲಿ ಮರುಜೀವ ಪಡೆದುಕೊಂಡು ಬೆಳೆದಿದೆ. ಇದಕ್ಕೆ ಸಾಕ್ಷಿಯೆಂಬಂತೆ ಧಾರವಾಡ ಜಿಲ್ಲೆ

ಕುಂದಗೋಳ ತಾಲೂಕಿನ ಗುಡಗೇರಿಯ ಬಸಣ್ಣ ಮುಳಗುಂದ ಇವರು ಆಕಾಶವಾಣಿಗಳಲ್ಲಿ ವಿವಿಧ ಸಭೆಗಳಲ್ಲಿ, ಹಬ್ಬಹರಿದಿನಗಳಲ್ಲಿ ಹವ್ಯಾಸಿ ಕಲಾವಿದರಾಗಿ ಏಕತಾರಿ ಹಿಡಿದು ಹಾಡುತ್ತಾ ಬಂದಿದ್ದಾರೆ.

ಹಾಡುವ ಸಂದರ್ಭಕ್ಕೆ ಪ್ರಾರಂಭದಲ್ಲಿ ಗುರುಸ್ತುತಿ ಇರುತ್ತದೆ. ನಂತರ ಸರಸ್ವತಿ ಅಥವಾ ದೈವ ಸ್ಮರಣೆಯೊಂದಿಗೆ ತತ್ವಪದಕಾರ ಪಾರಮಾರ್ಥಿಕ ವಿಷಯ ಸಾರುವ ಅನುಭಾವದ ಪದಗಳನ್ನು ಹೆಚ್ಚಾಗಿ ಹಾಡುತ್ತಾರೆ. ಗುರುವಿನ ಮಹತ್ವ, ಆಧ್ಯಾತ್ಮ ಮಾರ್ಗದಲ್ಲಿ ಶಿಷ್ಯ ಮುನ್ನಡೆಯುವ ಅಂಶಗಳನ್ನು ಸಾರುವ ತತ್ವಪದ ಹಾಡುತ್ತಾ ಸಾಗುತ್ತಾರೆ. ಉದಾಹರಣೆಗೆ..

**"ನೀನೇ ಅನಾದಿ ನಾನೇನು ಬೇಡಲಿ ಶಂಭೋಲಿಂಗಾ**
**ಮಾನವ ಜನ್ಮಕೆ ಬಂದು ಏನೇನು ಮಾಡಲಿಲ್ಲಾ ಶಂಭೋಲಿಂಗಾ।**
**ಹಾವು ಹರಿದಾಡಿತು ಚೇಳು ಕುಣಿದಾಡಿತು ಶಂಭೋಲಿಂಗಾ**
**ಹಾವು ಚೇಳನು ನುಂಗಿ ಕೂಗುವುದು ಶಂಭೋಲಿಂಗಾ॥"**[1]

ಧಾರವಾಡ ಜಿಲ್ಲೆಯ ಕುಂದಗೋಳದ ಶಂಭುಲಿಂಗನ ದೇವಸ್ಥಾನದಲ್ಲಿ ಶರೀಫ ಶಂಭುಲಿಂಗನ ಸ್ಮರಣೆ ಮಾಡುತ್ತಾ ಹೇಳಿದ ಪದವಿದು. ಪರಮಾತ್ಮನಾದ ಶಿವ ಸ್ಮಶಾನವಾಸಿ ಇಂತಹ ಶಿವನೆ ಎಲ್ಲವನ್ನೂ ತೊರೆದು ಸ್ಮಶಾನ ಸೇರಿಸುವಾಗ ನಶ್ವರವಾದ ಈ ಶರೀರದ ವ್ಯಾಮೋಹ ನಮಗೇಕೆಬೇಕು? ಹರಿದಾಡೋ ಚೇಳು, ಹಾವಿನಂತೆ ಈ ಮನಸ್ಸು ಹರಿದಾಡುತಿದೆ, ಮನದ ಕಲ್ಪನೆಗಳು ಕುಣಿದಾಡುತಿವೆ. ಈ ಹಾವು ಚೇಳನು ನುಂಗಿ ಮನವ ನಿಗ್ರಹಿಸುವ ಶಕ್ತಿ ನೀಡೋ ಶಂಭೋಲಿಂಗ ಎಂದು ಏಕತಾರಿಯೊಂದಿಗೆ ಏಕಾಂತಗೊಂಡು ಪರಮಾತ್ಮನಲ್ಲಿ ಬೇಡಿಕೊಳ್ಳುವ ಪರಿ ಇಲ್ಲಿ ಕಾಣುತ್ತೇವೆ ಎಂದು ಗುಡಗೇರಿಯ ಬಸಣ್ಣ ಮುಳಗುಂದರವರು ಏಕತಾರಿ ನುಡಿಸುತ್ತಾ ಜನರಿಗೆ ಶರೀಫರನ್ನು ಪರಿಚಯಿಸುತ್ತಾ ಬಂದಿದ್ದಾರೆ.

ಏಕತಾರಿಯ ಕುರಿತಾಗಿ ಧಾರವಾಡ ಜಿಲ್ಲೆಯ ಗುಡಗೇರಿಯ ಕಲಾವಿದರಾದ ಬಸಣ್ಣ ಮುಳಗುಂದ ಹೇಳುವಂತೆ "ಇದೊಂದು ಜನಪದ ಕಲಾಪ್ರಕಾರವಾಗಿದ್ದು, ಈ ಏಕತಾರಿಯು ಒಂದೆ ತಂತಿ ಹೊಂದಿದ ತಂತಿವಾದ್ಯವಾಗಿದ್ದು, ಮೊದಲು ತತ್ವಪದಕಾರರು ಇವನ್ನು ಹಿಡಿದು ಸಂಸಾರದ ಜಂಜಾಟದಿಂದ ಹೊರಬರಲು ಪ್ರಕೃತಿಯ ಏಕಾಂತ ಸ್ಥಳವಾದ ಕೆರೆ ಕಟ್ಟೆಗಳಲ್ಲಿ, ಗುಡಿ–ಗುಂಡಾರಗಳಲ್ಲಿ ಕುಳಿತು ಪದಕಟ್ಟಿ ಹಾಡುತ್ತಿದ್ದರು. ನಮ್ಮ ಭಾಗದಲ್ಲಿ ಶರೀಫರು ಈ ಏಕತಾರಿ ಹಿಡಿದೆ ಪದ ರಚಿಸುತ್ತಿದ್ದರು. ಬದುಕಿನ ಆತ್ಯಂತಿಕ ಸುಖ ಕಾಣುವುದೆ ಇವರ ಮೂಲ ಉದ್ದೇಶವಾಗಿತ್ತು. ಅದನ್ನು ನಾವು ಹವ್ಯಾಸಿ ಕಲೆಯಾಗಿ ಮುಂದುವರೆಸಿಕೊಂಡು ಬಂದಿದ್ದೇವೆ"[2]. ಎಂದು ಹೇಳುವ ಇವರ ಮಾತುಗಳು ಏಕತಾರಿ ಹಾಡುಗಳ ಮಹತ್ವ ತಿಳಿಸಿಕೊಡುತ್ತವೆ. ಮೊದಲು ಇದು ವೃತ್ತಿ ಕಲೆಯಾಗಿ ನಂತರ ಹವ್ಯಾಸಿ ಕಲೆಯಾಗಿ

ಬದಲಾಗುತ್ತಾ ಬಂದಿದೆ.

**ಭಜನಾಪದ ಹಾಡುಗಳ ಹಾಡುಗಾರಿಕೆ ಸ್ವರೂಪ:**

ಬಹುವ್ಯಕ್ತಿ ಪ್ರಾಯೋಗಿಕ ಮಾದರಿಯಲ್ಲಿ ಭಜನಾ ಮಾದರಿಯಲ್ಲಿ ಹಾಡುವ ಕ್ರಮವಿದೆ. ಉತ್ತರ ಕರ್ನಾಟಕದುದಕ್ಕೂ ಭಜನಾಪದ ಹಾಡುಗಳನ್ನು ಇವತ್ತಿಗೂ ಹಾಡುತ್ತಾರೆ. ಭಜನೆ ಎಂಬುದು 'ಭಜಿಸುವುದು' ಎಂಬ ಅರ್ಥಕೊಡುತ್ತದೆ. ಕಲಾವಿದರು ತಮಗಿಷ್ಟವಾದ ದೈವ ಸ್ಮರಣೆಯೊಂದಿಗೆ ತತ್ವಪದಗಳನ್ನು ಹಾಡುತ್ತಾರೆ. ಕೆಳ ಮತ್ತು ಮಧ್ಯಮ ತರಗತಿಯ ಜನಾಂಗದವರು ದೇವಸ್ಥಾನ ಮಂದಿರಗಳಲ್ಲಿ, ಜಾತ್ರೆ ಉತ್ಸವದ ಸಂದರ್ಭದಲ್ಲಿ ಹಲವು ಜನ ಆಸಕ್ತ ಕಲಾವಿದರು ಒಂದಡೆ ಸೇರಿ ಹಾಡುತ್ತಾರೆ. ಹಾಡುವ ಕಲಾವಿದರಲ್ಲಿ ಎರಡು ರೀತಿ ಇವೆ. ಮುಮ್ಮೇಳ ಮತ್ತು ಹಿಮ್ಮೇಳ ಕಲಾವಿದರೆಂದು ಅವರನ್ನು ಕರೆಯುತ್ತಾರೆ. ಮುಮ್ಮೇಳ ಕಲಾವಿದನೆ ಇಲ್ಲಿ ಮುಖ್ಯ ಹಾಡುಗಾರನಾಗಿದ್ದು, ಆತ ಹಾಡಿದ ಹಾಡನ್ನು ಹಿಮ್ಮೇಳದವರು ಪುನಃ ಹಾಡುತ್ತಾರೆ. ಮುಮ್ಮೇಳದ ಕಲಾವಿದ ಪಲ್ಲವಿ ಅನುಪಲ್ಲವಿ ಹಾಡಿ ನುಡಿಗಳನ್ನು ಮೊದಲು ಹಾಡುತ್ತಾನೆ. ತದನಂತರ ಉಳಿದ ಹಿಮ್ಮೇಳದ ಕಲಾವಿದರು ಮುಖ್ಯಕಲಾವಿದನ ಹಾಡನ್ನೇ ಹಾಡುತ್ತಾರೆ. ಹೀಗೆ ಪುನ: ಹಾಡಲು ಕಾರಣ ಪ್ರತಿ ಸಾಲಿಗೆ ಉಸಿರನ್ನು ಬಿಟ್ಟು ದನಿವಾರಿಸಿಕೊಂಡು ಮುಂದಿನ ನುಡಿಯನ್ನು ಹಾಡಲು ಅನುವು ಮಾಡಿಕೊಳ್ಳುವುದಾಗಿದೆ.

ಭಜನಾ ಹಾಡುಗಳ ಹಾಡಿಕೆಯಲ್ಲಿ ವಾದ್ಯಗಳು ಮಹತ್ವದ ಪಾತ್ರವಹಿಸಿವೆ ಹಾರ್ಮೋನಿಯಂ, ಡಗ್ಗಾ, ತಾಳ, ಝಾಂಜ್, ತಪ್ಪಡಿ, ಡೋಲು ವಾದ್ಯಗಳು ಇದ್ದು, ಇವುಗಳನ್ನು ಭಜನಾ ಪದದ ಹಾಡಿಕೆಯಲ್ಲಿ ರಾಗ, ತಾಳ, ಲಯ ಬದ್ಧವಾಗಿ ನುಡಿಸುವ ನುರಿತ ಕಲಾವಿದರು ಇರುತ್ತಾರೆ. ಕಲಾವಿದರಲ್ಲಿ ಹಾಡಿನ ಅರ್ಥಕ್ಕಿಂತ ಹೆಚ್ಚು ಗಮನ ಹಾಡುಗಾರಿಕೆಯ ಹಾಡಿಕೆಯಲ್ಲಿರುತ್ತದೆ. ಭಜನಾಪದ ಹಾಡುಗಾರಿಕೆಯ ಕೆಲವು ಸಂದರ್ಭಗಳ ಕುರಿತು ಇಲ್ಲಿ ಚರ್ಚಿಸಲಾಗಿದೆ.

**ಹಬ್ಬ ಆಚರಿಸುವಾಗಿನ ಸಂದರ್ಭ:**

ಭಜನಾಪದಗಳು ಹಬ್ಬ, ಜಾತ್ರೆ, ಉತ್ಸವಗಳನ್ನು ಆಚರಿಸುವಾಗಲೆಲ್ಲ ಪ್ರಯೋಗವಾಗುತ್ತಾ ಬಂದಿವೆ. ಈ ಸಂದರ್ಭದಲ್ಲಿ ಹಾಡುವ ಹಾಡುಗಳಲ್ಲಿ ಆಯಾ ಹಬ್ಬಗಳ ಪ್ರಾಮುಖ್ಯತೆಯನ್ನೂ, ತತ್ವಪದಕಾರರು ಬಿಂಬಿಸಿರುವುದನ್ನು ಕಲಾವಿದರು ತಮ್ಮ ಹಾಡಿನ ಮೂಲಕ ಜನಮಾನಸಕ್ಕೆ ತಲುಪಿಸುತ್ತಾ ಬಂದಿರುವರು. ಉದಾಹರಣೆಗೆ ಈ ಪದ್ಯ ಗಮನಿಸಬಹುದು.

**''ಪಂಚಮಿ ಹಬ್ಬ ಬಂದಿತು ಗೆಳತಿ ಇನ್ನಾರಿಗ್ದೇಳಲಿ**
**ಅಕ್ಕವ್ವ ನಾರಿ ಜೋಕಾಲಿ ಏರಿ ಕೈಬೀಸಿ ಯಾರ ಕರೆಯಲಿ**

**ಕೊಬ್ಬರಿ ತಂಬಿಟ್ಟು ಅರಳಿಟ್ಟು ಮುಡುಪಿಟ್ಟು|**
**ಅಣ್ಣನ ಪಾಲು ತಮ್ಮನ ಪಾಲು ಅತ್ತೆಯ ಪಾಲು ಮುತ್ತಾಗಲಿ**
**ಊರು ಪಾಲು ದೇವರ ಪಾಲು ಗುರುವಿನ ಪಾಲು ಆತ್ಮದಲಿ**
**ವಸುಧೆಯೊಳು ಶಿಶುನಾಳಧೀಶನ ಪಾಲು ಬಸವಣ್ಣನಿಗೆ ಮುಟ್ಟಲಿ"[3]**

ಪಂಚಮಿ ಹಬ್ಬ ಭಾರತದ ಪ್ರಮುಖ ಹಬ್ಬಗಳಲ್ಲಿ ಒಂದಾಗಿದ್ದು, ಇಂತಹ ಹಬ್ಬದ ಆಚರಣೆ ಸ್ವರೂಪಗಳನ್ನು ಇಲ್ಲಿ ಕಾಣುತ್ತೇವೆ. ಈ ಹಬ್ಬ ಹೆಣ್ಣುಮಕ್ಕಳಿಗೆ ಅಚ್ಚುಮೆಚ್ಚು. ಮದುವೆಯಾದ ಹೆಣ್ಣುಮಗಳ ಚಿತ್ತ ತವರು ಮನೆಯತ್ತ ಇರುತ್ತದೆ. ಇಂತಹ ಹಬ್ಬವನ್ನು ಶರೀಫರು ಪದದಲ್ಲಿ ಜೋಕಾಲಿ ಆಡುವ ಮತ್ತು ಹಾಲನ್ನು ಎರೆಯುವ ಪದ್ದತಿಯನ್ನು ಇಲ್ಲಿ ವರ್ಣಿಸಿದ್ದಾರೆ. ಅಲ್ಲದೇ ಭಜನಾಪದಗಳನ್ನು ಸತ್ತ ವ್ಯಕ್ತಿಯ ಮನೆಯ ಮುಂದೆ ರಾತ್ರಿಯಿಡಿ ಹಾಡುತ್ತಾರೆ. ಅಲ್ಲದೆ ಅಮವಾಸ್ಯೆ ಹಬ್ಬ-ಹರಿದಿನ, ಜಾತ್ರೆ- ಉತ್ಸವದಂದು ರಾತ್ರಿಯಿಡಿ ಜಾಗರಣೆ ಮಾಡುತ್ತಾ ತತ್ವಪದಗಳನ್ನು ಭಜನಾ ರೂಪದಲ್ಲಿ ಹಾಡುತ್ತಾರೆ. ಎಲ್ಲ ಕಲಾವಿದರು ರೈತಾಪಿ, ಕೂಲಿಕಾರಿಕೆಯ ಜನಸಮೂಹವಾಗಿದ್ದು ತಮ್ಮ ದಿನದ ಆಯಾಸವನ್ನು ಕಳೆಯಲು ದೇವಸ್ಥಾನದಂತಹ ಯಾವುದಾದರು ಒಂದು ಏಕಾಂತ ಸ್ಥಳದಲ್ಲಿ ಕುಳಿತು ಹಾಡುವುದರೊಂದಿಗೆ ಆಯಾಸವನ್ನು ಕಳೆದುಕೊಳ್ಳುತ್ತಿದ್ದರು. ಭಜನಾಪದ ಹಾಡುಗಾರಿಕೆಯಲ್ಲಿ ಸ್ಪರ್ಧೆಗಳು ಏರ್ಪಡುತ್ತವೆ.

**ವ್ಯಕ್ತಿ ಮರಣ ಹೊಂದಿದ (ಶವ ಸಂಸ್ಕಾರ) ಸಂದರ್ಭ:**

ಧಾರವಾಡ ಪರಿಸರದಲ್ಲಿ ಯಾರಾದರೂ ಪುರುಷ ಅಥವಾ ಮಹಿಳೆ ದೇಹ ಬಿಟ್ಟರೆ ಆ ಸಂದರ್ಭದಲ್ಲಿ ವ್ಯಕ್ತಿಯ ಶವ ಸಂಸ್ಕಾರ ಮಾಡಿ ಬರುವವರೆಗೂ ಭಜನಾಪದಗಳನ್ನು ಹಾಡುವುದು ರೂಢಿಯಾಗಿದೆ. ಸತ್ತ ವ್ಯಕ್ತಿಯ ಮನೆಯಲ್ಲಿ ದುಃಖ ಆವರಿಸಿರುತ್ತದೆ. ಇಂತಹ ವೇಳೆಯಲ್ಲಿ ಊರಿನ ಭಜನಾ ಕಲಾವಿದರು ತಮ್ಮ ಭಜನಾ ಮಂಡಳಿಯೊಂದಿಗೆ ಸತ್ತ ಮನೆಯಲ್ಲಿ ಭಜನಾಪದ ಹಾಡುವರು. ಭಜನಾ ಪದಗಳು ಹೆಚ್ಚಾಗಿ ಬದುಕಿನ ತತ್ವಗಳನ್ನು, ಸಂಸಾರದ ನಿಸ್ಸಾರತೆ, ಭಗವಂತನ ನಾಮಸ್ಮರಣೆಯನ್ನು ತಿಳಿಸಿಕೊಡುತ್ತವೆ. ಧಾರವಾಡ ಪರಿಸರದಲ್ಲಿ ಹಲವು ಕಲಾವಿದರನ್ನು ಸಂದರ್ಶಿಸಿದಾಗ ಊರಲ್ಲಿ ಯಾರಾದರೂ ತೀರಿಕೊಂಡಾಗ ತಾವು ಯಾವ ಯಾವ ಪದಗಳನ್ನು ಹಾಡುತ್ತೀರಿ? ಎಂದು ಪ್ರಶ್ನಿಸಿದಾಗ ಅವರು ಹಾಡಿದ ಕೆಲವು ಪದಗಳ ಸಾಲುಗಳು ಹೀಗಿವೆ...

**"ಹೋಗುತಿಹುದು ಕಾಯವ್ಯರ್ಥ ಇದರ**
**ಲಾಘವ ತಿಳಿದವ ಯೋಗಿಸಮರ್ಥ**
**ಭೋಗ ಲಂಪಟ ಸುಖ ಘನವು ಭವ**
**ರೋಗದಿ ಮರಣಕ್ಕೆ ಆದಿಯೋ ಅನುವು"[4] (ಶರೀಫರ ಪದ)**

**"ಹೊನ್ನು ಮಣ್ಣು ನನ್ನವು ಎಂದು ಹಲುಬ ಬ್ಯಾಡೋ ಮನುಜಾ**
**ಮಣ್ಣಿನ ದೇಹ ಮಣ್ಣೊಳಗ ಹೋಗುವದು ಮರಿಯ ಬ್ಯಾಡೋ ನಿಜಾ**
**ಹೆಂಡರು ಮಕ್ಕಳು ಬಂಧು ಬಳಗವು ಹಣ ಇರುವ ತನಕ**
**ಋಣಾ ತೀರಿದರ ಕೊಡತಾರೋ ಮಣ್ಣ ನಂಬಿದ ಜಗದಾಗ**
**ರವಿನ ದಾರಿ ಹೇಳಿದ ನಮ್ಮ ಗುರುಸಿದ್ಧ ಜಗದೊಳಗ"[5] (ವಾಲಿ ಮಹಾರಾಜರ ಪದ)**

ಹೀಗೆ ಮೇಲಿನ ಎಲ್ಲ ಪದಗಳನ್ನು ಗಮನಿಸಿದರೆ ಶರೀರದ ನಶ್ವರತೆಯನ್ನು ತತ್ವಪದಕಾರರು ಸಾರಿದ್ದಾರೆ. ಇಂತಹ ತಾತ್ವಿಕಾಂಶಗಳನ್ನು ಸಾರುವುದರೊಂದಿಗೆ ಸಾಂತ್ವನ ಹೇಳುವ ರೀತಿ ಇಲ್ಲಿರುವುದನ್ನು ಕಾಣುತ್ತೇವೆ.

ಹೀಗೆ ತತ್ವಪದಗಳು ಏಕತಾರಿ, ಭಜನಾಪದ ಮಾದರಿಗಳಲ್ಲದೇ ಜಾನಪದ, ಸಂಗೀತ ಮಾದರಿಯಲ್ಲಿಯೂ ಬಳಕೆಗೊಳ್ಳುವುದನ್ನು ಕಾಣಬಹುದಾಗಿದೆ. ಇತ್ತೀಚೆಗೆ ಹವ್ಯಾಸಿ ಕಲಾವಿದರು ಹುಟ್ಟಿಕೊಂಡಿದ್ದು, ತಮ್ಮ ವೃತ್ತಿ ಬದುಕಿನ ಜೊತೆಗೆ ಹವ್ಯಾಸಿ ಕಲೆಯಾಗಿ ತತ್ವಪದಗಳನ್ನು ಹಾಡುತ್ತಾ ಜಾತ್ರೆ-ಉತ್ಸವದಲ್ಲಿ, ಯುವ್‌ಟೂಬ್, ಫೇಸ್ಬುಕ್ ಮುಂತಾದ ಅಂತರ್ಜಾಲಗಳಲ್ಲಿ ಹಾಡುತ್ತಾ ಬಂದಿರುವುದನ್ನು ಕಾಣುತ್ತೇವೆ. ಅಲ್ಲದೇ ಸಾಹಿತ್ಯ ಸಂಘಟನೆಗಳು, ಇಲಾಖೆಗಳು ನಡೆಸುವ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ, ಸಾಹಿತ್ಯ ಸಮ್ಮೇಳನಗಳಲ್ಲಿ ಈ ತತ್ವಪದಗಳನ್ನು ಏಕ ವ್ಯಕ್ತಿಯಾಗಿ ಏಕತಾರಿ ವಾದ್ಯದ ಮೂಲಕ ಹಾಗೂ ಭಜನಾ ರೂಪದಲ್ಲಿ ಬಹುವ್ಯಕ್ತಿಯಾಗಿ ಹಾಡುವುದನ್ನು ಕಾಣುತ್ತೇವೆ. ಒಟ್ಟಾರೆ ತತ್ವಪದಗಳ ಜೀವಂತಿಕೆ ಇರವುದೇ ಅವುಗಳು ಪ್ರಯೋಗಿಸುವಿಕೆಯಲ್ಲಿ. ಇವುಗಳನ್ನು ಕಲಾವಿದರು ಇಂದಿಗೂ ಜೀವಂತವಾಗಿ ಇರಿಸಿಕೊಂಡು ಬಂದಿದ್ದಾರೆ.

**ಕೊನೆ ಟಿಪ್ಪಣಿಗಳು:**

1. ಶಿವಾನಂದ ಗುಬ್ಬಣ್ಣವರ (ಸಂ), (2017), ಕರ್ನಾಟಕ ಸಮಗ್ರ ತತ್ವಪದಗಳ ಜನಪ್ರಿಯ ಸಾಹಿತ್ಯ ಮಾಲೆ: ಸಂಪುಟ-02, ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಬೆಂಗಳೂರು, ಪು.ಸಂ. 2
2. ಸಂದರ್ಶನ, ಬಸಣ್ಣ ಮುಳಗುಂದ, (ವಯಸ್ಸು: 69), ಆಕಾಶವಾಣಿ ಏಕದಾರಿ ಕಲಾವಿದರು, ಗುಡಗೇರಿ ತಾ. ಕುಂದಗೋಳ, ದಿನಾಂಕ-10-01-2018.
3. ಶಿವಾನಂದ ಗುಬ್ಬಣ್ಣವರ (ಸಂ), (2017), ಕರ್ನಾಟಕ ಸಮಗ್ರ ತತ್ವಪದಗಳ ಜನಪ್ರಿಯ ಸಾಹಿತ್ಯ ಮಾಲೆ: ಸಂಪುಟ-02, ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಬೆಂಗಳೂರು, ಪು.ಸಂ. 97
4. ಸಂದರ್ಶನ, ಹಾಡಿದವರು ಕಲಾವಿದ ನಿಂಗಪ್ಪ ಬಾರಕೇರ ಹಾಗೂ ಸಂಗಡಿಗರು, (ವಯಸ್ಸು 65), ಗ್ರಾಮದೇವಿ ಭಜನಾ ಮಂಡಳಿ ಸಾ. ಭಂಡಿವಾಡ ತಾ. ಹುಬ್ಬಳ್ಳಿ ಜಿ. ಧಾರವಾಡ, ದಿನಾಂಕ 18-5-2019, ಗ್ರಾಮದಲ್ಲಿ ವ್ಯಕ್ತಿಯೊಬ್ಬ ದೇಹ ಬಿಟ್ಟ ಸಂದರ್ಭ.
5. ಸಂದರ್ಶನ, ಹಾಡಿದವರು ಕಲಾವಿದ ಹಸನಸಾಬ ಭಾವಾಖಾನವರ ಹಾಗೂ ಸಂಗಡಿಗರು,

(ವಯಸ್ಸು 52), ಮಾರುತಿ ಭಜನಾ ಸಂಘ ಸಾ. ಭಂಡಿವಾಡ ತಾ. ಹುಬ್ಬಳ್ಳಿ ಜಿ. ಧಾರವಾಡ, ದಿನಾಂಕ 18–5–2019, ಗ್ರಾಮದಲ್ಲಿ ವ್ಯಕ್ತಿಯೊಬ್ಬ ದೇಹ ಬಿಟ್ಟ ಸಂದರ್ಭ.

## ಪರಾಮರ್ಶನ ಗ್ರಂಥಗಳು:


1. ಅಮರೇಶ ನುಗಡೋಣಿ, (2014), ತತ್ವಪದ ಸಾಹಿತ್ಯ ಅಧ್ಯಯನ, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
2. ಆನಂದಮೂರ್ತಿ ಜಿ.ವಿ., (1998), ತತ್ವಪದಕಾರರು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
3. ಶಿವಾನಂದ ಗುಬ್ಬಣ್ಣವರ (ಸಂ), (2017), ಕರ್ನಾಟಕ ಸಮಗ್ರ ತತ್ವಪದಗಳ ಜನಪ್ರಿಯ ಸಾಹಿತ್ಯ ಮಾಲೆ: ಸಂಪುಟ–02, ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಬೆಂಗಳೂರು.
4. ರಹಮತ್ ತರೀಕೆರೆ & ಅರುಣ ಜೋಳದಕೂಡ್ಲಗಿ (ಸಂ), (2017), ಕರ್ನಾಟಕ ಸಮಗ್ರ ತತ್ವಪದಗಳ ಜನಪ್ರಿಯ ಸಾಹಿತ್ಯ ಮಾಲೆ: ಸಂಪುಟ– 01, ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಬೆಂಗಳೂರು.


**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.